ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ

**E-mail ID: icps.kar@gmail.com** **Ph.No.080-22867383**

ಸಂಖ್ಯೆ:ಮರನಿ/ಮರ/ಬಾ.ಕಾ/188/2020-21 ದಿನಾಂಕ:16-09-2021

ಆಯುಕ್ತರು,
ಕಾರ್ಮಿಕ ಇಲಾಖೆ,
ಕಾರ್ಮಿಕ ಭವನ,
ಬನ್ನೇರುಘಟ್ಟ, ಬೆಂಗಳೂರು.

ಮಾನ್ಯರೇ,

ವಿಷಯ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹಾಲಿ ವಾಸ್ತವ್ಯ ಪಡೆದಿರುವ ಮತ್ತು ವಾಸ್ತವ್ಯ ಪಡೆಯಲಿರುವ ಮಕ್ಕಳ ಪಾಲಕರಿಗೆ/ಪೋಷಕರಿಗೆ ಕಾರ್ಮಿಕ ಕಾರ್ಡ್‌ನ್ನು ಒದಗಿಸಿಕೊಡುವ ಕುರಿತು.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ:ಮರನಿ/ಮರ/ಸುತ್ತೋಲೆ-26/2021-22, ದಿನಾಂಕ:16-09-2021.

* * * * *

ರಾಜ್ಯದ 30 ಜಿಲ್ಲೆಗಳಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ನೋಂದಾಯಿತ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ರಕ್ಷಿಸಲ್ಪಟ್ಟ ಮಕ್ಕಳುಗಳನ್ನು ಮಕ್ಕಳ ಕಲ್ಯಾಣ ಸಮಿತಿ ಆದೇಶದ ಮೇರೆಗೆ ಮಕ್ಕಳನ್ನು ದಾಖಲಿಸಿಕೊಂಡು ಮಕ್ಕಳ ಆರೈಕೆ ಮತ್ತು ರಕ್ಷಣೆಗಾಗಿ ಅಗತ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಾಸ್ತವ್ಯ ಪಡೆದಿರುವ ಮಕ್ಕಳ ಬಹುತೇಕ ಕುಟುಂಬಸ್ಥರು, ವಲಸೆ ಕಾರ್ಮಿಕರು, ಕೂಲಿ ಕಾರ್ಮಿಕರು ಮತ್ತು ಕಟ್ಟಡ ಕಾರ್ಮಿಕರಾಗಿರುವುದು ಮಕ್ಕಳ ವೈಯಕ್ತಿಕ ಕಡತಗಳಿಂದ ತಿಳಿದುಬರುತ್ತಿದೆ. ಬಹುತೇಕ ಕಾರ್ಮಿಕರು, ಕಾರ್ಮಿಕರ ಇಲಾಖೆಯಿಂದ ಒದಗಿಸಲಾಗುತ್ತಿರುವ ಕಾರ್ಮಿಕರ ಕಾರ್ಡನ್ನು ಪಡೆಯುವ ಬಗ್ಗೆ ಮಾಹಿತಿ ತಿಳಿಯದೆ ಕಾರ್ಮಿಕರ ಕಾರ್ಡ್ ಪಡೆಯುವಲ್ಲಿ ವಂಚಿತರಾಗಿರಬಹುದು. ಆದುದರಿಂದ, ರಾಜ್ಯದ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳ ಹಾಲಿ ವಾಸ್ತವ್ಯ ಪಡೆದಿರುವ ಹಾಗೂ ಮುಂದಿನ ದಿನಗಳಲ್ಲಿ ವಾಸ್ತವ್ಯ ಪಡೆಯಲಿರುವ ಮಕ್ಕಳ ಕುಟುಂಬದವರಿಗೆ ಕಾರ್ಮಿಕ ಕಾರ್ಡ್‌ನ್ನು ಕಾರ್ಮಿಕ ಇಲಾಖೆಯಿಂದ ಒದಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿ ಉಲ್ಲೇಖದ ಈ ಕಛೇರಿ ಸುತ್ತೋಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಯವರಿಗೆ ಸೂಚಿಸಲಾಗಿರುತ್ತದೆ. ಆದ್ದರಿಂದ, ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಮಟ್ಟದ ಅಧಿಕಾರಿ ಹಾಗೂ ಯಾವುದೇ ಮಕ್ಕಳ ಪಾಲನಾ ಸಂಸ್ಥೆಯ ಅಧಿಕಾರಿ/ಸಿಬ್ಬಂದಿಯವರು ತಮ್ಮನ್ನು ಸಂಪರ್ಕಿಸಿದಲ್ಲಿ ಅಥವಾ ಲಿಖಿತವಾಗಿ ಕಾರ್ಮಿಕ ಕಾರ್ಡ್‌ನ್ನು ಪಡೆಯಲು ಕೋರಿದ ಸಂದರ್ಭಗಳಲ್ಲಿ ತಾವು ದಯಮಾಡಿ ಸಹಕಾರ ನೀಡಿ ಪಾಲನಾ ಸಂಸ್ಥೆಯಲ್ಲಿ ಹಾಲಿ ವಾಸ್ತವ್ಯ ನೀಡಿರುವ ಹಾಗೂ ಮುಂದಿನ ದಿನಗಳಲ್ಲಿ ವಾಸ್ತವ್ಯ ಪಡೆಯಲಿರುವ ಮಕ್ಕಳ ಕುಟುಂಬಗಳಲ್ಲಿನ ಆರೈಕೆದಾರರಿಗೆ ಕಾರ್ಮಿಕರ ಕಾರ್ಡ್‌ನ್ನು ಒದಗಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

16.09.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

2.....

V.E/Labour Department-188

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ :

1. ಎಲ್ಲಾ ಜಿಲ್ಲೆಯ ಸದಸ್ಯರುಗಳು, ಬಾಲನ್ಯಾಯ ಮಂಡಳಿಗಳು.
2. ಎಲ್ಲಾ ಜಿಲ್ಲೆಯ ಅಧ್ಯಕ್ಷರು/ಸದಸ್ಯರುಗಳು, ಮಕ್ಕಳ ಕಲ್ಯಾಣ ಸಮಿತಿ.
3. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರುಗಳಿಗೆ
4. ಎಲ್ಲಾ ಜಿಲ್ಲೆಯ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಖಾಸಗಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು
5. ಶಾಖಾ ರಕ್ಷಣಾ ಕಡತ
6. ಕಛೇರಿ ಕಡತ

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ

**E-mail ID: icps.kar@gmail.com** **Ph.No.080-22867383**

ಸಂಖ್ಯೆ:ಮರನಿ/ಮರ/ಸುತ್ತೋಲೆ-26/2021-22 ದಿನಾಂಕ:16-09-2021

## ಸುತ್ತೋಲೆ

ವಿಷಯ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹಾಲಿ ವಾಸ್ತವ್ಯ ಪಡೆದಿರುವ ಮತ್ತು ವಾಸ್ತವ್ಯ ಪಡೆಯಲಿರುವ ಮಕ್ಕಳ ಪಾಲಕರಿಗೆ/ಪೋಷಕರಿಗೆ ಕಾರ್ಮಿಕ ಕಾರ್ಡ್‌ನ್ನು ಒದಗಿಸಿಕೊಡುವ ಕುರಿತು.

* * * * *

ರಾಜ್ಯದ 30 ಜಿಲ್ಲೆಗಳಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿಯಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ನೋಂದಾಯಿತ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ರಕ್ಷಿಸಲ್ಪಟ್ಟು ಮಕ್ಕಳ ಕಲ್ಯಾಣ ಸಮಿತಿ ಆದೇಶದ ಮೇರೆಗೆ ಮಕ್ಕಳನ್ನು ದಾಖಲಿಸಿಕೊಂಡು ಮಕ್ಕಳ ಆರೈಕೆ ಮತ್ತು ರಕ್ಷಣೆಗಾಗಿ ಅಗತ್ಯ ಸೇವೆಗಳನ್ನು ಈ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳ ಮೂಲಕ ಒದಗಿಸಲಾಗುತ್ತಿದೆ.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಾಸ್ತವ್ಯ ಪಡೆದಿರುವ ಮಕ್ಕಳ ಬಹುತೇಕ ಕುಟುಂಬಸ್ಥರು ವಲಸೆ ಕಾರ್ಮಿಕರು, ಕೂಲಿ ಕಾರ್ಮಿಕರು ಮತ್ತು ಕಟ್ಟಡ ಕಾರ್ಮಿಕರಾಗಿರುವುದು ಮಕ್ಕಳ ವೈಯಕ್ತಿಕ ಕಡತಗಳಿಂದ ತಿಳಿದುಬರುತ್ತದೆ. ಆದರೆ ಬಹುತೇಕ ಕಾರ್ಮಿಕರು ಕಾರ್ಮಿಕ ಇಲಾಖೆಯಿಂದ ಒದಗಿಸಲಾಗುತ್ತಿರುವ ಕಾರ್ಮಿಕರ ಕಾರ್ಡನ್ನು ಪಡೆಯುವ ಬಗ್ಗೆ ಮಾಹಿತಿ ತಿಳಿಯದೆ ಕಾರ್ಮಿಕರ ಕಾರ್ಡ್ ಪಡೆಯುವಲ್ಲಿ ವಂಚಿತರಾಗಿರಬಹುದು. ಆದುದರಿಂದ, ರಾಜ್ಯದ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳ ಹಾಲಿ ವಾಸ್ತವ್ಯ ಪಡೆದಿರುವ ಹಾಗೂ ಮುಂದಿನ ದಿನಗಳಲ್ಲಿ ವಾಸ್ತವ್ಯ ಪಡೆಯಲಿರುವ ಮಕ್ಕಳ ಕುಟುಂಬದವರಿಗೆ ಕಾರ್ಮಿಕ ಕಾರ್ಡ್‌ನ್ನು ಕಾರ್ಮಿಕ ಇಲಾಖೆಯಿಂದ ಒದಗಿಸಲು ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ಈ ಕುರಿತು ಕೈಗೊಂಡ ಕ್ರಮದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ/ಗೂಗಲ್ ಡ್ರೈವ್‌ನಲ್ಲಿ ಅಳವಡಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಪ್ರತೀ ಶುಕ್ರವಾರದಂದು ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಸೂಚಿಸಿದೆ.

16.09.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ :

1. ಎಲ್ಲಾ ಜಿಲ್ಲೆಯ ಸದಸ್ಯರುಗಳು, ಬಾಲನ್ಯಾಯ ಮಂಡಳಿಗಳು.
2. ಎಲ್ಲಾ ಜಿಲ್ಲೆಯ ಅಧ್ಯಕ್ಷರು/ಸದಸ್ಯರುಗಳು, ಮಕ್ಕಳ ಕಲ್ಯಾಣ ಸಮಿತಿ.
3. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರುಗಳಿಗೆ
4. ಎಲ್ಲಾ ಜಿಲ್ಲೆಯ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಖಾಸಗಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು
5. ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ, ಬೆಂಗಳೂರು ಇವರ ಆಪ್ತಶಾಖೆಗೆ ಮಾಹಿತಿಗಾಗಿ
6. ಶಾಖಾ ರಕ್ಷಣಾ ಕಡತ
7. ಕಛೇರಿ ಕಡತ

V.E/Circular-26

## ನಮೂನೆ

## ಕಾರ್ಮಿಕರ ಕಾರ್ಡನ್ನು ಪಡೆದ ಮಕ್ಕಳ ಕುಟುಂಬಗಳ ಮಾಹಿತಿಯ ವಿವರ

ದಿನಾಂಕ:_______________ರಿಂದ ____________________ರವರೆಗೆ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಮಕ್ಕಳ ಪಾಲನಾ ಸಂಸ್ಥೆಯ ಹೆಸರು | ಮಗುವಿನ ಹೆಸರು | ಲಿಂಗ | ವಯಸ್ಸು | National Tracking System for Missing and Vulnerable Children Portal ನ ಮಗು ID | ಕಾರ್ಮಿಕರ ಕಾರ್ಡ್ ಪಡೆದ ಮಗುವಿನ ಕುಟುಂಬ ಸದಸ್ಯರ ವಿವರ | | |
|---|---|---|---|---|---|---|---|---|---|
| | | | | | | | ಕಾರ್ಮಿಕರ ಕಾರ್ಡ್ ಪಡೆದ ಮಗು ಕುಟುಂಬ ಸದಸ್ಯರ ಹೆಸರು/ಹೆಸರುಗಳು | ಮಗುವಿನೊಂದಿಗೆ ಅವರ ಸಂಬಂಧ | ಕಾರ್ಡ್ ಪಡೆದ ದಿನಾಂಕ: |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |